# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 833 (899) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 19.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಯಾದಗಿರಿಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ವಿಷಾನಿಲ ಹೊರ ಸೂಸುವ ಹಾಗೂ ವಿಷತ್ಯಾಜ್ಯದ ನೀರು ನದಿಗೆ ಸೇರಿ ಕುಡಿಯುವ ನೀರನ್ನು ವಿಷವನ್ನಾಗಿ ಮಾಡಿ ಮಕ್ಕಳು ವಯೋವೃದ್ಧರು ಕಣ್ಣು, ಚರ್ಮ ಹಾಗೂ ಉಸಿರಾಟದ ಸಮಸ್ಯೆಯಿಂದ ಬಳಲುವಂತೆ ಮಾಡುತ್ತಿರುವ ಈ ರಾಸಾಯಿಕ ಕಂಪನಿಗಳ ವಿರುದ್ಧ ಜನಾಕ್ರೋಶ ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಂಪನಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಯಾದಗಿರಿ ಜಿಲ್ಲೆ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ವಿಷಾನಿಲ ಹೊರ ಸೂಸುವ ಹಾಗೂ ವಿಷತ್ಯಾಜ್ಯದ ನೀರು ನದಿಗೆ ಸೇರಿ ಕುಡಿಯುವ ನೀರನ್ನು ವಿಷವನ್ನಾಗಿ ಮಾಡಿ ಮಕ್ಕಳು ವಯೋವೃದ್ಧರು ಕಣ್ಣು, ಚರ್ಮ ಹಾಗೂ ಉಸಿರಾಟದ ಸಮಸ್ಯೆಯಿಂದ ಬಳಲುವಂತೆ ಮಾಡುತ್ತಿರುವ ಈ ರಾಸಾಯಿಕ ಕಂಪನಿಗಳ ವಿರುದ್ಧ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಸರಣಿಯಾಗಿ ಸುದ್ದಿ ಪ್ರಕಟವಾಗುತ್ತಿದ್ದು, ಸದರಿ ವಿಷಯದ ಕುರಿತು ಸ್ಥಳ ಪರಿಶೀಲನೆ ಮಾಡಿ ಜಂಟಿ ವರದಿ ಸಲ್ಲಿಸುವಂತೆ ದಿನಾಂಕ: 24.04.2025 ರಂದು ಜಿಲ್ಲಾಧಿಕಾರಿಗಳು ಯಾದಗಿರಿ ರವರು ಸಹಾಯಕ ಆಯುಕ್ತರು, ಯಾದಗಿರಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ ಹಾಗೂ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ ವಲಯ ಕಚೇರಿ, ಕಲಬುರ್ಗಿ ರವರುಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿರುತ್ತಾರೆ.<br><br>ಸಹಾಯಕ ಆಯುಕ್ತರು, ಯಾದಗಿರಿ ರವರ ನೇತೃತ್ವದಲ್ಲಿ ಸಮಿತಿ ಸದಸ್ಯರು ಜಂಟಿ ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುವ ಆಧಾರದ ಮೇಲೆ ಸಹಾಯಕ ಆಯುಕ್ತರು, ಯಾದಗಿರಿ ರವರು ದಿನಾಂಕ: 14.05.2025 ರಂದು ಕೈಗಾರಿಕಾ ಘಟಕಗಳು ಅನುಸರಿಸಬೇಕಾದ ಸುಧಾರಣಾ ಕ್ರಮಗಳನ್ನು ಒಳಗೊಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ. |
| ಆ) | ಈ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಕಂಪನಿಗಳನ್ನು ಬಂದ್ ಮಾಡಿ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ಸದಸ್ಯರು ಗ್ರಾಮ ಸಭೆಯಲ್ಲಿ ಠರಾವು ಪಾಸ್ ಮಾಡಿರುವುದು ಸರಕಾರದ ಗಮನಕ್ಕೆ | ಯಾದಗಿರಿ ಜಿಲ್ಲೆಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಕಂಪನಿಗಳ ಬಗ್ಗೆ, ದಿ: 25.03.2025 ರಂದು ಮೆ: ಕಲ್ಯಾಣ ಕರ್ನಾಟಕ ವೇಸ್ಟ್ ಮ್ಯಾನೇಜಮೆಂಟ್ ಲಿ. ಘಟಕದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸ್ಥಳ |

| | | |
|---|---|---|
| | ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳಾವುವು; (ವಿವರ ನೀಡುವುದು ಠರಾವು ಪ್ರತಿ ಒದಗಿಸುವುದು) | ಪರಿವೀಕ್ಷಣೆ ನಡೆಸಿ ಸದರಿ ಕೈಗಾರಿಕಾ ಪ್ರದೇಶದಲ್ಲಿ ವಿಷಾನಿಲ ಹೊರ ಸೂಸುವ ಹಾಗೂ ವಿಷತ್ಯಾಜ್ಯದ ನೀರು ನದಿಗೆ ಸೇರುತ್ತಿರುವ ಬಗ್ಗೆ ಚರ್ಚಿಸಲಾಯಿತು.<br><br>ಮೆ: ಕಲ್ಯಾಣ ಕರ್ನಾಟಕ ವೇಸ್ಟ್ ಮ್ಯಾನೇಜಮೆಂಟ್ ಪ್ರೈ.ಲಿ ಮತ್ತು ಉದ್ದಿಮೆದಾರರ ಜೊತೆಗೆ ಜಂಟಿಯಾಗಿ ಸಭೆ ಜರುಗಿಸಿ ರಾಸಾಯನಿಕ ತ್ಯಾಜ್ಯ ವಿಲೇವಾರಿಗಾಗಿ ಒಂದೇ ರೀತಿಯ ಬೆಲೆ ನಿಗದಿಪಡಿಸಿ ತ್ಯಾಜ್ಯ ಪಡೆಯಲು ಹಾಗೂ CETP & TSDF ಘಟಕದಿಂದ ಹೊರ ಬರುತ್ತಿರುವ ದುರ್ವಾಸನೆ ತಡೆಗಟ್ಟಿದ್ದು, ಕ್ರಮವಾಗಿ ಸುವಾಸನೆಭರಿತ ರಾಸಾಯನಿಕ ಮಿಶ್ರಿತ ದ್ರವ ಸಿಂಪಡಿಸಲು ಸೂಚಿಸಲಾಯಿತು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ದುರ್ವಾಸನೆ ಬರುತ್ತಿರುವುದು ಸುತ್ತಮುತ್ತಲಿನ ಸಾರ್ವಜನಿಕರು ತಿಳಿಸಿರುತ್ತಾರೆ ಹಾಗಾಗಿ ಸದರಿ ಘಟಕವನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲು ರಾಸಾಯನಿಕ ಘಟಕಗಳ ಉದ್ದಿಮೆದಾರರಿಗೆ ತಿಳಿಸಲಾಯಿತು.<br><br>ಯಾದಗಿರಿ ಜಿಲ್ಲೆಯ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿರುವ ರಾಸಾಯನಿಕ ಕಂಪನಿಗಳನ್ನು ಬಂದ್ ಮಾಡಿ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಗ್ರಾಮ ಪಂಚಾಯತ್ ಸದಸ್ಯರು ದಿನಾಂಕ: 29.05.2025 ರಂದು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿರುತ್ತಾರೆ. |
| ಇ) | ಏರೋ ಸ್ಪೇಸ್ ಕಂಪನಿ ರಾಜ್ಯದ ಕೈ ತಪ್ಪಿತು ಎಂದು ಹತಾಶರಾಗುವ ಬದಲು ಕಡೇಚೂರು-ಬಾಡಿಯಾಳ ಪ್ರದೇಶದಲ್ಲಿ ಖಾಲಿ ಇರುವ ಎರಡು ಸಾವಿರ ಎಕರೆಯಲ್ಲಿ ಏರೋಸ್ಪೇಸ್ ಕಂಪನಿ ನಿರ್ಮಾಣ ಮಾಡಿ ಹೈದರಾಬಾದ ಕರ್ನಾಟಕದ ಯುವ ಜನತೆಗೆ ಉದ್ಯೋಗ ನೀಡಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ಏರೋ ಸ್ಪೇಸ್‌ಗೆ ಸಂಬಂಧಿಸಿದ ಕಂಪನಿಗಳು ಸದರಿ ಕೈಗಾರಿಕಾ ಪ್ರದೇಶದಲ್ಲಿ ತಮ್ಮ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮುಂದೆ ಬಂದಲ್ಲಿ, ಅವರಿಗೆ ಅಗತ್ಯ ಬೆಂಬಲ ಸೇವೆ ನೀಡಿ, ನಿಯಮಾನುಸಾರ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ. |

**ಸಂಖ್ಯೆ: ಸಿಐ 436 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು